ಅಧ್ಯಕ್ಷರು.—ಈಗ ವಿಧೇಯಕವನ್ನು ಮಂಡಿಸುವುದು...

ಶ್ರೀ ಆರ್. ವೆಂಕಟರಾಮಯ್ಯ —ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಬೇಗ ಕ್ರಮವನ್ನು ತೆಗೆದು ಕೊಳ್ಳದೆ ವಿಳಂಬ ಮಾಡಿದ್ದನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಹಾಗೆಯೇ ಮಾಡಿ.

(ಈ ಸಂದರ್ಭದಲ್ಲಿ ಮಾನ್ಯ ವೆಂಕಟರಾಮಯ್ಯನವರು ಸಭಾತ್ಯಾಗ ಮಾಡಿದರು.)

ಶಾಸನ ರಚನಾ ಕಾರ್ಯಕಲಾಪಗಳು

೧೯೮೯ನೇ ಇಸವಿಯ ಕರ್ನಾಟಕ ವಿಧಾನ ಮಂಡಲ (ಅನರ್ಹತಾ ಪ್ರತಿಬಂಧ) (ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ,

೧೯೮೯ನೇ ಇಸವಿಯ ಕರ್ನಾಟಕ ವಿಧಾನ ಮಂಡಲ (ಅನರ್ಹತಾ ಪ್ರತಿಬಂಧ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ,

೧೯೮೯ನೇ ಇಸವಿಯ ಕರ್ನಾಟಕ ವಿಧಾನ ಮಂಡಲ (ಅನರ್ಹತಾ ಪ್ರತಿಬಂಧ) (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ,

೧೯೮೯ನೇ ಇಸವಿಯ ಕರ್ನಾಟಕ ವಿಧಾನ ಮಂಡಲ (ಅನರ್ಹತಾ ಪ್ರತಿಬಂಧ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.*

೨. ೧೯೮೯ನೇ ಇಸವಿಯ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ) (ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೆ,

೧೯೮೯ನೇ ಇಸವಿಯ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ,

"೧೯೮೯ನೇ ಇಸವಿಯ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

---

* Annexure (2)

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ನಗರಾಭಿವೃದ್ಧಿ ಮತ್ತು ವಸತಿ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೆ,

"೧೯೯೦ನೇ ಇಸವಿಯ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ"

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

ವಿತ್ತೀಯ ಕಾರ್ಯಕಲಾಪಗಳು

೧೯೮೯-೯೦ನೆಯ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

ಡಾ. ಎಚ್. ಎಲ್. ತಿಮ್ಮೇಗೌಡ (ಹುಣಸೂರು).— ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಬೊಮ್ಮಾಯಿಯವರು ಮುಖ್ಯ ಮಂತ್ರಿಗಳಾದಮೇಲೆ ಮೊದಲನೆಯ ಆಯವ್ಯಯ ಪತ್ರವನ್ನು ನಮ್ಮ ಮುಂದೆ ಮಂಡಿಸಿದ್ದಾರೆ. ಇದು ಒಂದು ನಿರಾಶಾದಾಯಕ ಆಯವ್ಯಯಪತ್ರವೆಂದರೆ ಉತ್ಪ್ರೇಕ್ಷೆಯಾಗಲಾರದು. ಸರ್ಕಾರದವರು ಹಿಂದಿನ ವರ್ಷಗಳಲ್ಲಿ ನಮ್ಮ ರಾಜ್ಯದ ಆದಾಯ ಕಡಿಮೆಯಾಗುವುದಕ್ಕೆ ಏನೇನೋ ಸಬೂಬುಗಳನ್ನು ಕೊಡುತ್ತಿದ್ದರು. ಅದೇರೀತಿಯ ಸಬೂಬನ್ನು ಶ್ರೀಮಾನ್ ಬೊಮ್ಮಾಯಿಯವರು ತಮ್ಮ ಆಯವ್ಯಯ ಪತ್ರದಲ್ಲಿ ಹೇಳಿದ್ದಾರೆ. ಕೇಂದ್ರ ಸರ್ಕಾರದವರಮೇಲೆ ಕೆಲವು ಜವಾಬ್ದಾರಿಗಳನ್ನು ಹೇಳಿರುವುದನ್ನು ಬಿಟ್ಟರೆ ಮತ್ತೇನೂ ಇಲ್ಲ. ನಮ್ಮ ಸರ್ಕಾರದ ಆದಾಯವನ್ನು ಯಾವರೀತಿ ಹೆಚ್ಚು ಮಾಡಬೇಕು ಎನ್ನುವುದನ್ನು ಹೇಳುವುದು ಬಿಟ್ಟು ಕೇಂದ್ರ ಸರ್ಕಾರದಿಂದ ಹಣಬರಬೇಕು, ಅದು ಬರಬೇಕು ಇದು ಬರಬೇಕು ಎನ್ನುವುದನ್ನು ಮಾತ್ರ ಹೇಳಿದ್ದಾರೆ. ಈ ಒಂದು ಪರಿಸ್ಥಿತಿ ಎಲ್ಲ ರಾಜ್ಯಗಳಿಗೂ ಇದೆ. ಎನ್ನುವುದನ್ನು ತಾವು ತಿಳಿದುಕೊಳ್ಳಬೇಕು. ಈ ಪರಿಸ್ಥಿತಿ ಎಲ್ಲ ರಾಜ್ಯಗಳಿಗೂ ಇದರ ರೂ ಕೂಡ ಅವರು ಹೆಚ್ಚಿನ ಆದಾಯವನ್ನು ಅವರ ರಾಜ್ಯಗಳಲ್ಲಿ ಮಾಡಿಕೊಂಡು ನಮಗಿಂತ ಹೆಚ್ಚು ಖರ್ಚು ವೆಚ್ಚನ್ನು ಪ್ಲಾನಿಂಗ್‌ನಲ್ಲಿ ಮಾಡುತ್ತಿದ್ದಾರೆಂದು ನಾವು ತಿಳಿದುಕೊಂಡಿದ್ದೇವೆ. ಆದ್ದರಿಂದ ಕೇಂದ್ರ ಸರ್ಕಾರದವರಮೇಲೆ ತಾವು ಒತ್ತಾಯ ಮಾಡತಕ್ಕಂಥದ್ದು ಮಾಡಲೇಬೇಕಾಗುತ್ತದೆ. ನ್ಯಾಯವಾಗಿ ಯಾವ ಯಾವ ತೆರಿಗೆಗಳಿಂದ ನಮ್ಮ ರಾಜ್ಯಕ್ಕೆ ಹೆಚ್ಚಿನ ಪಾಲು ಬರಬೇಕು ಎಂದು ಕೇಳುವಂಥಾದ್ದನ್ನು ಫೈನಾನ್ಸ್ ಕಮಿಷನ್ ಬಂದಾಗ ಮತ್ತು ಪಾರ್ಟಿ ಮುಖ್ಯಮಂತ್ರಿಗಳ ಸಭೆಯಲ್ಲಿ ಹೇಳುವುದನ್ನೆಲ್ಲ ಹೇಳಿ. ಅದನ್ನೆಲ್ಲ ಹೇಳಿಕೊಂಡೂ ನಮ್ಮ ಸರ್ಕಾರದಿಂದ ಜನತೆಗೆ ಅನುಕೂಲವಾಗದಿದ್ದರೆ ಏನೇನು ಒಳ್ಳೆಯ ಕೆಲಸ ಮಾಡಿದಂತಾಗುವುದಿಲ್ಲವೆಂದು ನಾವು ತಿಳಿದುಕೊಂಡಿದ್ದೇವೆ. ಹಲವಾರು ಕ್ಷೇತ್ರಗಳಲ್ಲಿ ನಮ್ಮ ಸರ್ಕಾರ ವಿಫಲಗೊಂಡಿದೆ ಎಂದು ನಾವು ತಿಳಿದುಕೊಂಡಿರುತ್ತೇವೆ. ಕೃಷಿ ಉತ್ಪಾದನೆಯನ್ನು ಹೆಚ್ಚು ಮಾಡುತ್ತೇವೆಂದು ಹೇಳಿರುವುದು ಇದರಲ್ಲಿ ಇದೆ. ಕಳೆದ ವರ್ಷ ಡಿ.ಸಿ.ಎಚ್. ವರಲಕ್ಷ್ಮೀ ಹತ್ತಿಬೀಜ ಒಳ್ಳೆಯ ಗುಣಮಟ್ಟದ ಹತ್ತಿಬೀಜ ರೈತರಿಗೆ ಸಿಕ್ಕದೆ ಖಾಸಗಿಯವರು ಮೂರಾಟ ಮಾಡಿದ ನಕಲಿ ಹತ್ತಿಬೀಜವನ್ನು ರೈತರು ತಮ್ಮ ಹೊಲಗಳಲ್ಲಿ ಹಾಕಿ ಬೆಳೆದದ್ದರಿಂದ ಕೋಟ್ಯಾಂತರ ರೂಪಾಯಿಗಳ ನಷ್ಟವನ್ನು ಅನುಭವಿಸಬೇಕಾಯಿತು. ಇಲಾಖೆಯವರು ಒಳ್ಳೆಯ ಗುಣಮಟ್ಟದ ಹತ್ತಿಬೀಜವನ್ನು ರೈತರಿಗೆ ಒದಗಿಸಿಕೊಡಲಿಲ್ಲ, ಅದೇರೀತಿಯಲ್ಲಿ ಹಲವಾರು ಎಣ್ಣೆ ಬೀಜಗಳು ಒಳ್ಳೆಯ ಗುಣಮಟ್ಟದವುಗಳನ್ನು ಒದಗಿಸಲಾಗಲಿಲ್ಲ. ನಮ್ಮ ರಾಜ್ಯಕ್ಕೆ ಎಷ್ಟು ಬಿತ್ತನೇ ಬೀಜ ಬೇಕಾಗುತ್ತದೆ, ಎಷ್ಟು ಉತ್ಪಾದನೆಯನ್ನು ಮಾಡಬೇಕೆಂದು ಲೆಕ್ಕ ಹಾಕಿ ರೈತರಿಗೆ ಒದಗಿಸಿಕೊಡಲು ಸಾಧ್ಯವಾಗಲಿಲ್ಲ. ಕಳೆದವರ್ಷ ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ ಮಳೆ ಬಹಳ ಕಡಿಮೆಯಾಯಿತು. ಆದ್ದರಿಂದ ಸರ್ಕಾರದ ಲೋಕೋಪಯೋಗಿ ಇಲಾಖೆಯವರು ಕಡಿಮೆ ಅವಧಿಯಲ್ಲಿ ಫಸಲು ಬರತಕ್ಕಂಥ ಬತ್ತವನ್ನು ಹಾಕಿ ಎಂದು ಹೇಳಿದರು. ನಮ್ಮ ಹುಣಸೂರು ತಾಲ್ಲೂಕಿನಲ್ಲಿ ೨೫ ಸಾವಿರ ಎಕರೆಗಳಲ್ಲಿ ೫ ಸಾವಿರ ಎಕರೆಯಲ್ಲಿ ಮಾತ್ರ ಲಾಂಗ್ ಡ್ಯುರೇಷನ್ ಪ್ಯಾಡಿಯನ್ನು ಹಾಕಲಾಯಿತು. ೨೦ ಸಾವಿರ ಎಕರೆಯಲ್ಲಿ ಷಾರ್ಟ್ ಡ್ಯುರೇಷನ್ ಪಾಡಿಯನ್ನು ಹಾಕಲಾಯಿತು. ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ಮಳೆಯಾಗದ ಕಾರಣದಿಂದಾಗಿ ೨೦ ಸಾವಿರ ಎಕರೆಗಳಲ್ಲಿ ಸಂಪೂರ್ಣ ೮ ಕೋಟಿ ರೂಪಾಯಿಗಳಷ್ಟು ಬೆಳೆ ಆಗದೆ ನಷ್ಟ ಉಂಟಾಯಿತು. ಈ ರೀತಿ ನಮ್ಮ ಒಂದು ತಾಲ್ಲೂಕಿನಲ್ಲಿಯೇ ಅಲ್ಲ ರಾಜ್ಯದ ಹಲವಾರು ತಾಲ್ಲೂಕುಗಳಲ್ಲಿ ಸೀಡ್ ಕಾರ್ಪೊರೇಷನ್‌ನವರು ಉತ್ತಮ ಗುಣಮಟ್ಟದ ಬತ್ತದ ಬೀಜ, ಹತ್ತಿಯ ಬೀಜ ಮತ್ತು ಎಣ್ಣೆಯ ಬೀಜಗಳನ್ನು ಒದಗಿಸದಿದ್ದುದರಿಂದ ನಷ್ಟಕ್ಕೆ ಕಾರಣವಾಯಿತು. ಸೀಡ್ ಕಾರ್ಪೊರೇಷನ್‌ನವರು ಮತ್ತು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನವರು ಒಟ್ಟಿಗೆ ಸೇರಿ ರಾಜ್ಯಕ್ಕೆ ಎಷ್ಟು ಬಿತ್ತನೇಬೀಜ ಬೇಕಾಗುತ್ತದೆಂಬುದನ್ನು ಲೆಕ್ಕಹಾಕಿ ಒಳ್ಳೆಯ ಗುಣಮಟ್ಟದ ಬೀಜವನ್ನು ರೈತರಿಗೆ ಒದಗಿಸದ್ದಿರಿಂದ